ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 302-EK (RS)**

**Code No. : 302-EK (RS)**

## ಡಿ.ಎಲ್.ಎಡ್. ಪ್ರಥಮ ವರ್ಷ

## D.El.Ed. FIRST YEAR

### ಶಿಕ್ಷಣ

### EDUCATION

# ಮೂಲ ಪರಿಕಲ್ಪನೆಗಳ ಪರಿಚಯ

# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)

( Kannada & English Versions )

**(ಪರಿಷ್ಕೃತ ಪಠ್ಯವಸ್ತು)**

**(Revised Syllabus)**

ದಿನಾಂಕ : 16. 05. 2019 ]

Date : 16. 05. 2019 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

(ಕನ್ನಡ ಭಾಷಾಂತರ)

(Kannada Version)

**ಭಾಗ – I**

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** 10 × 1 = 10

1. "ಪ್ರಿಯಾ ತನ್ನ ಗೊಂಬೆಗೆ ಮಮತೆ ತೋರಿಸಿ ಪ್ರೀತಿಸುವ ತಾಯಿಯಂತೆ ಅಭಿನಯಿಸುತ್ತಿದ್ದಾಳೆ." ಇದು ಈ ಕೆಳಗಿನ ಆಟಕ್ಕೆ ಉದಾಹರಣೆ

   (A) ನಾಟಕೀಕರಣ ಆಟ
   (B) ಸಾಂಕೇತಿಕ ಆಟ
   (C) ಅಭಿವ್ಯಕ್ತಾತ್ಮಕ ಆಟ
   (D) ಪರಿಚಯಿಸುವ ಆಟ

2. ಜಾನ್ ಡ್ಯೂಯಿಯವರ ಪ್ರಕಾರ ಶಿಕ್ಷಣ ಎಂದರೆ

   (A) ವಿದ್ಯಾರ್ಥಿಯು ಪ್ರಪಂಚವನ್ನು ಗ್ರಹಿಸುವುದಕ್ಕಾಗಿ ವಿವಿಧ ಪರಿಕಲ್ಪನೆಗಳ ನಡುವೆ ಸಂಬಂಧ ಕಲ್ಪಿಸುವ ಕಾರ್ಯ
   (B) ಎಲ್ಲಾ ಅಂಶಗಳಲ್ಲಿ ಉಂಟಾಗುವ ಸಾಮರಸ್ಯ
   (C) ಮಾನವ ವ್ಯಕ್ತಿತ್ವವನ್ನು ಅದರ ಎಲ್ಲಾ ಆಯಾಮಗಳಲ್ಲಿ ವಿಕಾಸ ಮಾಡುವ ಪ್ರಕ್ರಿಯೆ
   (D) ಅನುಭವಗಳ ನಿರಂತರ ಪುನಃ ನಿರ್ಮಾಣ ಪ್ರಕ್ರಿಯೆಗಳ ಹಾದಿಯಲ್ಲಿ ಸಾಗುವುದು

3. ಈ ಕೆಳಗಿನ ಸೂಚ್ಯಂಕವು ಮಕ್ಕಳ ಮೂಲಭೂತ ಹಕ್ಕು ನೀಡುವಲ್ಲಿ ಭಾರತವು ಬದ್ಧತೆಯನ್ನು ತೋರಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ
   (A) ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ
   (B) ಸಾಕ್ಷರತೆಯ ದರ ಹೆಚ್ಚಾಗಿದೆ
   (C) ಶಿಶುಮರಣ ದರ ಏರಿಕೆಯಾಗಿದೆ
   (D) ಮಕ್ಕಳ ಬದುಕುಳಿಯುವ ಪ್ರಮಾಣ ಹೆಚ್ಚಾಗಿದೆ

4. ಸರ್ಕಾರದ ಧನಸಹಾಯದಿಂದಲೇ ಸಂಪೂರ್ಣವಾಗಿ ನಿರ್ವಹಣೆಗೊಳ್ಳುತ್ತಿರುವ ಶಿಕ್ಷಣ ಸಂಸ್ಥೆಯು ಯಾವುದೇ ಧಾರ್ಮಿಕ ಶಿಕ್ಷಣ ಬೋಧನೆಗಳನ್ನು ನೀಡುವಂತಿಲ್ಲ ಎಂದು ತಿಳಿಸಿರುವ ಅನುಚ್ಛೇದ
   (A) ಅನುಚ್ಛೇದ 27 (B) ಅನುಚ್ಛೇದ 28
   (C) ಅನುಚ್ಛೇದ 256 (D) ಅನುಚ್ಛೇದ 45

5. ಮಗುವನ್ನು ಸಾಮಾಜೀಕರಣಗೊಳಿಸುವ ಪ್ರಪ್ರಥಮ ಸಂಸ್ಥೆ
   (A) ಸಮುದಾಯ (B) ಶಾಲೆ
   (C) ಸಮವಯಸ್ಕರ ಗುಂಪು (D) ಕುಟುಂಬ

6. ಕೆಲವು ಕಲಿಕಾರ್ಥಿಗಳು ಚಿತ್ರಪಟ, ಮಾಡೆಲ್ ಮತ್ತು ಸ್ಲೈಡ್‌ಗಳನ್ನು ನೋಡಿ ಕಲಿಯಲು ಆದ್ಯತೆ ನೀಡುತ್ತಾರೆ. ಇವರ ಕಲಿಕಾ ಶೈಲಿಯನ್ನು ಹೀಗೆನ್ನುವರು
   (A) ವೀಕ್ಷಣಾ ಕಲಿಕಾರ್ಥಿ (B) ಆಲಿಕೆಯ ಕಲಿಕಾರ್ಥಿ
   (C) ಓದು ಮತ್ತು ಬರಹದ ಕಲಿಕಾರ್ಥಿ (D) ಸ್ಪರ್ಶದ ಕಲಿಕಾರ್ಥಿ

7. ಓರ್ವ ವಿದ್ಯಾರ್ಥಿಯು ಕಪ್ಪುಹಲಗೆ ಕೆಲಸ ಮಾಡಿದಾಗಲೆಲ್ಲ ತನ್ನ ಸ್ನೇಹಿತನಿಂದ ಕಾಪಿ ಮಾಡಿಕೊಳ್ಳುತ್ತಿರುತ್ತಾನೆ ಮತ್ತು ವಿವರಣೆ ನೀಡಿದಾಗ ತುಟಿಗಳ ಚಲನೆಗಳನ್ನು ಗಮನಿಸುತ್ತಿರುತ್ತಾನೆ. ಈ ಮಗು ಹೊಂದಿರುವ ಸಂಭವನೀಯ ಸಮಸ್ಯೆ
   (A) ದೃಷ್ಟಿದೋಷ (B) ಬುದ್ಧಿಮಾಂಧ್ಯತೆ
   (C) ಶ್ರವಣದೋಷ (D) ಡಿಸ್ಲೆಕ್ಸಿಯ

8. I. ರಾಜಕೀಯ ಪಕ್ಷ ಮತ್ತು ಆಡಳಿತದಲ್ಲಿ ಅಧಿಕಾರ ಹಾಗೂ ಸ್ಥಾನಮಾನಗಳ ಮೀಸಲಾತಿಯಿಂದ ಮೇಲ್ವರ್ಗದವರು ಅವಕಾಶ ಪಡೆಯುವಂತೆ ಮಾಡುವುದು.
   II. ಸಾಮಾಜಿಕವಾಗಿ ಶೋಷಿತರಾಗಿದ್ದವರು ಶಿಕ್ಷಣ ಪಡೆಯುವಂತೆ ಮಾಡುವುದು.
   III. ಸೌಲಭ್ಯವಂಚಿತರಿಗೆ ಹಾಗೂ ಕಟ್ಟಕಡೆಯ ಅಂಚಿನಲ್ಲಿರುವವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವುದು.
   IV. ತಂದೆಯ ವೃತ್ತಿಯನ್ನೇ ಮಕ್ಕಳು ಪಡೆಯುವಂತೆ ಮಾಡುವುದು.

   *ಮೀಸಲಾತಿ ಕುರಿತ ಮೇಲಿನ ಯಾವ ಹೇಳಿಕೆಗಳು ಸಮರ್ಪಕವಾಗಿಲ್ಲ :*
   (A) I ಮತ್ತು IV (B) II ಮತ್ತು IV
   (C) III ಮತ್ತು IV (D) II ಮತ್ತು III

9. ಒಳಗೊಳ್ಳುವ ಶಿಕ್ಷಣವು ಈ ಕೆಳಗಿನ ನಂಬಿಕೆಯನ್ನು ಹೊಂದಿದೆ
   I. ಎಲ್ಲಾ ಮಕ್ಕಳು ಒಂದೇ ರೀತಿಯ ಅಗತ್ಯ ಮತ್ತು ಸಾಮರ್ಥ್ಯವನ್ನು ಹೊಂದಿರುತ್ತಾರೆ.
   II. ಎಲ್ಲಾ ಮಕ್ಕಳು ಕಲಿಯಬಲ್ಲರು.
   III. ಪೋಷಕರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ ಮುಖ್ಯವಾಗಿರುತ್ತದೆ.
   IV. ಕೆಲವು ಮಕ್ಕಳಿಗೆ ಮಾತ್ರ ಶಿಕ್ಷಣವು ಮೂಲಭೂತ ಹಕ್ಕಾಗಿದೆ.

   *ಇವುಗಳಲ್ಲಿ :*
   (A) I ಮತ್ತು II (B) III ಮತ್ತು IV
   (C) II ಮತ್ತು IV (D) II ಮತ್ತು III

10. ಕೆಳಗೆ ನೀಡಿರುವ ಪಟ್ಟಿಯಲ್ಲಿ ಮೂಲಭೂತ ಕರ್ತವ್ಯಗಳನ್ನು ಗುರುತಿಸಿ :
    I. ಭಾರತದ ಸಾರ್ವಭೌಮತ್ವ ಐಕ್ಯತೆ, ಹಾಗೂ ಅಖಂಡತೆಗಳನ್ನು ಸಮರ್ಥಿಸುವುದು ಮತ್ತು ಸಂರಕ್ಷಿಸುವುದು.
    II. ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಇತ್ಯಾದಿಗಳ ಆಧಾರದ ಮೇಲೆ ಯಾವುದೇ ಪ್ರಜೆಗಳಿಗೆ ಪಕ್ಷಪಾತ ಮಾಡದಿರುವುದು.
    III. 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವುದು.
    IV. ನಮ್ಮ ಸಂಕೀರ್ಣ ಸಂಸ್ಕೃತಿಯ ಶ್ರೀಮಂತ ಪರಂಪರೆಗೆ ಮನ್ನಣೆ ನೀಡುವುದು ಮತ್ತು ಸಂರಕ್ಷಿಸುವುದು.

    *ಇವುಗಳಲ್ಲಿ :*

    (A) I ಮತ್ತು II (B) III ಮತ್ತು IV
    (C) I ಮತ್ತು IV (D) II ಮತ್ತು III

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** 5 × 2 = 10

11. ಶಿಕ್ಷಕರಾಗಿ ಸಮೂಹ ಮಾಧ್ಯಮವನ್ನು ಮಕ್ಕಳ ಸಾಮಾಜೀಕರಣದಲ್ಲಿ ಹೇಗೆ ಬಳಸಿಕೊಳ್ಳುವಿರಿ ?
12. D.P.E.P. ಕಾರ್ಯಕ್ರಮದ ಎರಡು ಮುಖ್ಯ ಉದ್ದೇಶಗಳನ್ನು ಬರೆಯಿರಿ.
13. ಹೊಂದಾಣಿಕೆ ಆಟ ಎಂದರೇನು ? ಅದಕ್ಕೆ ಒಂದು ಉದಾಹರಣೆ ನೀಡಿ.
14. ಶ್ರವಣ ದೋಷವಿರುವ ಮಗುವಿಗೆ ತರಗತಿಯಲ್ಲಿ ಕಲಿಕಾ ಪರಿಸರವನ್ನು ಹೇಗೆ ಸೃಷ್ಟಿಸುವಿರಿ ?
15. ಲೀ ಶೂಲಮಾನ್‌ರವರ ಪ್ರಕಾರ ಪರಿಣಾಮಕಾರಿ ಶಿಕ್ಷಕರು ಹೊಂದಿರಬೇಕಾದ ಜ್ಞಾನದ ನಾಲ್ಕು ಕ್ಷೇತ್ರಗಳನ್ನು ನಮೂದಿಸಿ.
16. ಪಂದ್ಯಗಳು ಮತ್ತು ಸಮೂಹಗತಿ ಶಾಸ್ತ್ರದ ನಡುವಿರುವ ಸಂಬಂಧವೇನು ?
17. ಯಾವುದಾದರೊಂದು ಮೂಲಭೂತ ಕರ್ತವ್ಯವನ್ನು ನಿಮ್ಮ ವಿದ್ಯಾರ್ಥಿಗಳ ಮನದಲ್ಲಿ ಹೇಗೆ ಬಿತ್ತುವಿರಿ ಎಂದು ವಿವರಿಸಿ.
18. ಬಾಲ್ಯಾವಸ್ಥೆಯು ಸಾಧನೆಯ ಸಂದಿಗ್ಧ ಅವಧಿ ಹೇಗೆ ?

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಮತ್ತು (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ :** 8 × 5 = 40

19. a) ಶೈಕ್ಷಣಿಕ ಸಮಾಜಶಾಸ್ತ್ರದ ವ್ಯಾಪ್ತಿಯ ಐದು ಅಂಶಗಳನ್ನು ವಿವರಿಸಿ.

    *ಅಥವಾ*

    b) ಮಗುವಿನ ಜಾತಿ ಮತ್ತು ಧರ್ಮ ಅದರ ಅನನ್ಯತೆಯ ರೂಪಣಾತ್ಮಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂಬುದನ್ನು ವಿವರಿಸಿ.

20. a) 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಶೈಕ್ಷಣಿಕ ಗುರಿಗಳನ್ನು ನಮೂದಿಸಿ ಅವುಗಳಲ್ಲಿ ಸೂಕ್ತವಾದ ಎರಡನ್ನು ನಿಮ್ಮ ಶಾಲೆಯಲ್ಲಿ ಹೇಗೆ ಅನುಷ್ಠಾನಗೊಳಿಸುವಿರಿ ಎಂಬುದನ್ನು ವಿವರಿಸಿ.

*ಅಥವಾ*

b) "ಶಾಲೆ–ಸಮುದಾಯದ ನಡುವಿನ ಸಂಬಂಧ ತಾನೇ ತಾನಾಗಿ ಸಂಭವಿಸುವುದಿಲ್ಲ. ಇದಕ್ಕಾಗಿ ಶಿಕ್ಷಕರು ಉತ್ತಮ ಸಂವಹನ ಹಾಗೂ ಅಂತರ್ ವ್ಯಕ್ತಿ ಕೌಶಲ್ಯಗಳನ್ನು ಬಳಸಬೇಕಾಗುವುದು." ಈ ಹೇಳಿಕೆಯನ್ನು ವಿವರಿಸಿ.

21. a) ಪಿಯಾಜೆ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥವನ್ನು ತಿಳಿಸಿ.

*ಅಥವಾ*

b) ಆಟದ ಶೈಕ್ಷಣಿಕ ನಿಹಿತಾರ್ಥಗಳನ್ನು ಪಟ್ಟಿ ಮಾಡಿ.

22. a) "ವೈವಿಧ್ಯತೆಯನ್ನು ಒಳಗೊಳ್ಳುವ ತರಗತಿಯಲ್ಲಿ ಸಮಸ್ಯೆ ಎಂದು ಪರಿಗಣಿಸುವ ಬದಲಾಗಿ ಸಂಪನ್ಮೂಲವಾಗಿ ಬಳಕೆಯಾಗಬೇಕು." ವಿಶ್ಲೇಷಿಸಿ.

*ಅಥವಾ*

b) "ಋಣಾತ್ಮಕ ಮನೋಭಾವನೆಯು ಒಳಗೊಳ್ಳುವಿಕೆಗಿರುವ ದೊಡ್ಡ ಅಡೆತಡೆಯಾಗಿದೆ." ವಿಶ್ಲೇಷಿಸಿ.

23. a) "ಮನುಷ್ಯರು ಮೂಲಭೂತವಾಗಿ ಸಾಮಾಜಿಕ ಜೀವಿ ಮತ್ತು ಅವರು ಕಲಿತಿರುವುದೆಲ್ಲಾ ಸಾಮಾಜಿಕ ಸಂದರ್ಭಗಳಿಂದ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

b) "ಶಾಲೆಯು ಒಂದು ಶಕ್ತಿಶಾಲಿ ಸಾಮಾಜೀಕರಣ ಸಂಸ್ಥೆಯಾಗಿದೆ." ಈ ಹೇಳಿಕೆಯನ್ನು ವಿಶ್ಲೇಷಿಸಿ.

24. a) "ತಪ್ಪುಗಳು ಮಕ್ಕಳ ಚಿಂತನೆಯನ್ನು ತಿಳಿಯುವ ಕಿಟಕಿಗಳಾಗಿವೆ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

b) "ಕಲಿಕೆಯು ಪ್ರಕ್ರಿಯೆ ಮತ್ತು ಉತ್ಪನ್ನವೂ ಸಹ ಆಗಿದೆ." ಈ ಹೇಳಿಕೆಯನ್ನು ವಿಶ್ಲೇಷಿಸಿ.

25. a) ನ್ಯೂನ್ಯತೆ ಇರುವ ವಿದ್ಯಾರ್ಥಿಗಳು ಅಡೆತಡೆಗಳಿಂದ ಹೊರಬರಲು ಶಿಕ್ಷಕರಾಗಿ ನೀವು ಅನುಸರಿಸುವ ಐದು ಮಾರ್ಗಗಳನ್ನು ವಿವರಿಸಿ.

*ಅಥವಾ*

b) ಒಳಗೊಳ್ಳುವ ಮಗು ಸ್ನೇಹಿ ತರಗತಿಯ ಉದ್ದೇಶಗಳು ಮತ್ತು ಗುರಿಗಳನ್ನು ಹೇಗೆ ಸಾಧಿಸುವಿರಿ ?

26. a) ಬಾಲ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ವಿವರಿಸಿ.

*ಅಥವಾ*

b) ತಾರುಣ್ಯಾವಸ್ಥೆಯ ಐದು ಗುಣಲಕ್ಷಣಗಳನ್ನು ವಿವರಿಸಿ.

**( English Version )**

**PART – I**

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. Priya loves and cuddles her doll who pretends to be a mother to it. This is an example for which of the following kinds of play ?
   (A) Dramatic play (B) Symbolic play
   (C) Expressive play (D) Familiarization play.
2. According to John Dewey education means
   (A) linking of concepts by the learner to gain an understanding of the world
   (B) harmony in all aspects
   (C) a process of developing the human personality in all its dimensions
   (D) a process of living through a continuous reconstruction of experiences.
3. Which of the following indicators shows that India's commitment towards Basic Rights of children is not taken care of ?
   (A) School dropout rates have decreased
   (B) Literacy rates have improved
   (C) Infant mortality rates are high
   (D) Child survival is up.
4. The Article which emphasizes that no religious instruction shall be provided in any educational institution wholly maintained out of state funds, is
   (A) Article 27 (B) Article 28
   (C) Article 256 (D) Article 45.
5. The first agency that socializes the child is
   (A) community (B) school
   (C) peer group (D) family.
6. Some learners prefer to learn by seeing chart, models and slides. This kind of learner is known as
   (A) visual learner (B) auditory learner
   (C) reading and writing learner (D) kinesthetic learner.

7. A student copies from his friend whenever black board work is done and observes lip movement during explanation. Possible problem of this child is

(A) Visual disability (B) Mental retardness

(C) Hearing disability (D) Dyslexia.

8. Consider the following statements :

I. Providing an opportunity to upper caste people to uphold position of power and authority in public administration system and political parties

II. Providing educational opportunities for socially exploited

III. Providing social justice to the marginalized and underprivileged

IV. To see that the father's occupation would become the occupation of the children.

Which of the above statements are not appropriate about reservation policy ?

(A) I and IV (B) II and IV

(C) III and IV (D) II and III.

9. Inclusive education is based on which of the following beliefs ?

I. All children have same needs and potentials

II. All children can learn

III. Involvement of parents and community matters

IV. The right to education is a basic right for only a few children.

*Of these :*

(A) I and II (B) III and IV

(C) II and IV (D) II and III.

10. Identify the Fundamental Duties in the following list :

I. To uphold and protect the sovereignty, unity and integrity of India

II. Not to discriminate against any citizen on grounds of religion, race, caste, sex, place of birth or any of them

III. Free and compulsory education for all children between the age group of 6 - 14 years

IV. To value and preserve the rich heritage of our composite culture.

(A) I and II (B) III and IV

(C) I and IV (D) II and III.

## PART – II

Answer any *five* of the following questions briefly, each answer not exceeding *half a* page. $5 \times 2 = 10$

11. As a teacher how do you use mass media in socialization of children ?

12. Write two objectives of DPEP.

13. What is meant by associative play ? Give an example.

14. How do you create learning environment for a hearing disabled child in your classroom ?

15. Mention four areas of professional knowledge that an effective teacher need to process according to Shulman.

16. What is the relationship between games and group dynamics ?

17. Explain how you sow the seed of any one of the Fundamental Duties among your students.

18. How is childhood a critical period of achievement ?

## PART – III

There is an alternate question for each of the following. Answer either 'a' or 'b', each answer not exceeding *one* page. $8 \times 5 = 40$

19. (a) Explain any *five* aspects of scope of Sociology of Education.

*OR*

(b) Explain how the caste and religion of a child play an important role in the formation of its identity.

20. (a) Mention the educational aims as envisaged in the NCF 2005. Explain how you implement any two of these in your school.

*OR*

(b) "School community linkages do not just happen. They require good communication and interpersonal skills on the part of the teacher." Explain this statement.

21. (a) Mention the educational implications of Piaget's theory.

*OR*

(b) List out the educational implications of play.

22. (a) "Diversity in an inclusive classroom should be addressed as a resource than a problem." Analyse.

*OR*

(b) "Negative attitude is the biggest barrier for inclusion." Analyse.

23. (a) "Human beings are basically a social animal and everything they learn takes place in a social context." Analyse the statement.

*OR*

(b) "School is a powerful agency of socialization." Analyse the statement.

24. (a) "Mistakes are windows to children's thinking." Analyse the statement.

*OR*

(b) "Learning is a process as well as a product." Analyse the statement.

25. (a) Explain five measures that you would follow to overcome the barriers of disabled children.

*OR*

(b) How do you achieve the aims and objectives of child friendly inclusive classroom ?

26. (a) Explain *five* characteristics of childhood.

*OR*

(b) Explain *five* characteristics of adolescence.